1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**(297)139**
2) ಸದಸ್ಯರ ಹೆಸರು	:	**ಶ್ರೀ ಹ್ಯಾರಿಸ್ ಎನ್.ಎ.**
3) ಉತ್ತರಿಸುವ ಸಚಿವರು	:	**(ಶ್ರೀ ಮುರುಗೇಶ್ ಆರ್.ನಿರಾಣಿ) ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು.**

ಅ. ದೇವನಹಳ್ಳಿ ಪ್ರದೇಶದ ವ್ಯಾಪ್ತಿಯಲ್ಲಿ ವಿಮಾನದ ಬಿಡಿ ಭಾಗಗಳ ತಯಾರಿಕಾ ಘಟಕವನ್ನು ಸ್ಥಾಪನೆ ಮಾಡಲಗುವುದೆ;

ಹೌದು.

ಆ. ಹಾಗಿದ್ದಲ್ಲಿ, ಸದರಿ ಘಟಕದ ಸ್ಥಾಪನೆಗಾಗಿ ಸ್ವಾಧೀನಪಡಿಸಿಕೊಳ್ಳಲು ನಿರ್ಧರಿಸಿರುವ ಭೂಮಿಯ ವಿಸ್ತೀರ್ಣ ಎಷ್ಟು;

"Aerospace & Aircraft Components" ಕೈಗಾರಿಕೆಗಳಿಗಾಗಿ 918-16 3/4 ಎಕರೆ ಜಮೀನನ್ನು ಸ್ವಾಧೀನಪಡಿಸಲಾಗಿದೆ.

ಇ. ರೈತರ ಭೂಮಿಗೆ ಸರ್ಕಾರ ನಿಗದಿಪಡಿಸಿದ ಪರಿಹಾರದ ಹಣವೆಷ್ಟು?

ಸ್ವಾಧೀನಪಡಿಸಿಕೊಂಡ ಜಮೀನಿನ ಸ್ಥಿತಿಗತಿ ಆದಾರದ ಮೇಲೆ ಬೆಂಗಳೂರು ಉತ್ತರ ತಾಲ್ಲೂಕಿನ ದುಮ್ಮನಹಳ್ಳಿ, ಸಿಂಗಹಳ್ಳಿ ಮತ್ತು ಉಣಸೂರು ಗ್ರಾಮಗಳಿಗೆ ಎಕರೆ ಒಂದಕ್ಕೆ ರೂ.57.00 ಲಕ್ಷದಂತೆ ಹಾಗೂ ದೇವನಹಳ್ಳಿ ತಾಲ್ಲೂಕಿನ ಜೊನ್ನಹಳ್ಳಿ, ಬಾಲದಿಮ್ಮನಹಳ್ಳಿ, ಕವಡದಾಸನಹಳ್ಳಿ ಹಾಗೂ ಬಟ್ರಮಾರನಹಳ್ಳಿ ಗ್ರಾಮಗಳಲ್ಲಿನ ಜಮೀನುಗಳಿಗೆ ಎಕರೆ ಒಂದಕ್ಕೆ ರೂ.55.00 ಲಕ್ಷದಂತೆ ಪರಿಹಾರಧನ ನಿಗದಿಪಡಿಸಲಾಗಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**(298)140**
ಸದಸ್ಯರ ಹೆಸರು	:	**ಶ್ರೀ ಹ್ಯಾರಿಸ್ ಎನ್.ಎ.(ಶಾಂತಿನಗರ)**
ಉತ್ತರಿಸುವ ಸಚಿವರು	:	**(ಶ್ರೀ ಕರುಣಾಕರ ರೆಡ್ಡಿ) ಕಂದಾಯ ಸಚಿವರು**

(ಅ) ಇ-ಮುದ್ರಾಂಕ ವ್ಯವಸ್ಥೆಯ ಮೂಲಕ ಸ್ವತ್ತುಗಳ ನೋಂದಣಿ ಮಾಡುವುದನ್ನು ಸರ್ಕಾರ ಜಾರಿಗೊಳಿಸಿದೆಯೇ? (ವಿವರ ನೀಡುವುದು)

ಸರ್ಕಾರದ ಆದೇಶ ಸಂಖ್ಯೆ: ಕಂಇ 122 ಮುನೋಮು 2007 ದಿನಾಂಕ: 13-2-2008ರ ಆದೇಶದಂತೆ ಬೆಂಗಳೂರು ನಗರದ ಗಾಂಧಿನಗರ, ಜಯನಗರ ಮತ್ತು ಶಿವಾಜಿನಗರ ಈ ಮೂರು ಉಪ ನೋಂದಣಿ ಕಛೇರಿಗಳಲ್ಲಿ ಇ-ಮುದ್ರಾಂಕ ವ್ಯವಸ್ಥೆಯ ಮೂಲಕ ನೋಂದಣಿ ಮಾಡುವುದನ್ನು ಪ್ರಾಯೋಗಿಕವಾಗಿ ದಿನಾಂಕ: 14-3-2008 ರಿಂದ ಜಾರಿಗೆ ತರಲಾಗಿದೆ.